ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿಗಳ ಕಟ್ಟಡ, ಬೆಂಗಳೂರು 560001
ದೂರವಾಣಿ ಸಂಖ್ಯೆ: 080-22342162, E-mail:karnregs@gmail.com

ಸಂಖ್ಯೆ RDC-EGS/03/2019 ದಿನಾಂಕ: 15-04-2020

## ಹೊರಗುತ್ತಿಗೆ ಆಧಾರದ ಸೇವೆ ಪಡೆಯಲು ಪ್ರಕಟಣೆ

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಿಲ್ಲೆಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ತಾಂತ್ರಿಕ ಸಹಾಯಕರು (ಅರಣ್ಯೀಕರಣ/ಕೃಷಿ/ತೋಟಗಾರಿಕ/ರೇಷ್ಮೆ) ಹುದ್ದೆಗಳಿಗೆ ಸಿಬ್ಬಂದಿಗಳ ಸೇವೆ ಪಡೆಯಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ವಿವಿಧ ಜಿಲ್ಲೆಗಳಲ್ಲಿನ ತಾಂತ್ರಿಕ ಸಹಾಯಕರು (ಅರಣ್ಯೀಕರಣ/ಕೃಷಿ/ತೋಟಗಾರಿಕೆ/ರೇಷ್ಮೆ) ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಸಿಬ್ಬಂದಿಗಳ ಸೇವೆ ಪಡೆಯಲು ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಹುದ್ದೆಗಳ ವಿವರ :-**

| ಕ್ರ.ಸಂ | ಜಿಲ್ಲೆಯ ಹೆಸರು | ಹೊರಗುತ್ತಿಗೆ ಹುದ್ದೆಯ ಹೆಸರು ಮತ್ತು ಹುದ್ದೆಗಳ ಸಂಖ್ಯೆ | |
|---|---|---|---|
| | | ತಾಂತ್ರಿಕ ಸಹಾಯಕರು (ಅರಣ್ಯೀಕರಣ) | ತಾಂತ್ರಿಕ ಸಹಾಯಕರು (ಕೃಷಿ/ತೋಟಗಾರಿಕೆ ಮತ್ತು ರೇಷ್ಮೆ) |
| 1 | ಬಾಗಲಕೋಟೆ | 7 | 12 |
| 2 | ಬಳ್ಳಾರಿ | 8 | 16 |
| 3 | ಬೆಳಗಾವಿ | 14 | 22 |
| 4 | ಬೆಂಗಳೂರು ಗ್ರಾಮಾಂತರ | 2 | 7 |
| 5 | ಬೆಂಗಳೂರು ನಗರ | 1 | 1 |
| 6 | ಬೀದರ್ | 5 | 9 |
| 7 | ಚಾಮರಾಜನಗರ | 3 | 7 |
| 8 | ಚಿಕ್ಕಬಳ್ಳಾಪುರ | 3 | 10 |
| 9 | ಚಿಕ್ಕಮಗಳೂರು | 4 | 8 |
| 10 | ಚಿತ್ರದುರ್ಗ | 4 | 8 |

| ಕ್ರ.ಸಂ | ಜಿಲ್ಲೆಯ ಹೆಸರು | ಹೊರಗುತ್ತಿಗೆ ಹುದ್ದೆಯ ಹೆಸರು ಮತ್ತು ಹುದ್ದೆಗಳ ಸಂಖ್ಯೆ | |
|---|---|---|---|
| | | ತಾಂತ್ರಿಕ ಸಹಾಯಕರು (ಅರಣ್ಯೀಕರಣ) | ತಾಂತ್ರಿಕ ಸಹಾಯಕರು (ಕೃಷಿ/ತೋಟಗಾರಿಕೆ ಮತ್ತು ರೇಷ್ಮೆ) |
| 11 | ದಕ್ಷಿಣ ಕನ್ನಡ | 2 | 5 |
| 12 | ದಾವಣಗೆರೆ | 3 | 10 |
| 13 | ಧಾರವಾಡ | 3 | 8 |
| 14 | ಗದಗ | 4 | 10 |
| 15 | ಹಾಸನ | 4 | 10 |
| 16 | ಹಾವೇರಿ | 3 | 10 |
| 17 | ಕಲಬುರಗಿ | 6 | 12 |
| 18 | ಕೊಡಗು | 2 | 3 |
| 19 | ಕೋಲಾರ | 4 | 10 |
| 20 | ಕೊಪ್ಪಳ | 3 | 8 |
| 21 | ಮಂಡ್ಯ | 4 | 11 |
| 22 | ಮೈಸೂರು | 2 | 7 |
| 23 | ರಾಯಚೂರು | 4 | 8 |
| 24 | ರಾಮನಗರ | 4 | 8 |
| 25 | ಶಿವಮೊಗ್ಗ | 4 | 14 |
| 26 | ತುಮಕೂರು | 5 | 15 |
| 27 | ಉಡುಪಿ | 2 | 3 |
| 28 | ಉತ್ತರ ಕನ್ನಡ | 8 | 11 |
| 29 | ವಿಜಯಪುರ | 5 | 10 |
| 30 | ಯಾದಗಿರಿ | 2 | 9 |
| | ಒಟ್ಟು | **125** | **282** |

2. **ವಿದ್ಯಾರ್ಹತೆ, ವಯೋಮಿತಿ ಮತ್ತು ಮಾಸಿಕ ಸಂಭಾವನೆ :-**

| ಕ್ರ.ಸಂ | ಹುದ್ದೆಯ ಹೆಸರು | ಕನಿಷ್ಠ ವಿದ್ಯಾರ್ಹತೆ | ಅಪೇಕ್ಷಣೀಯ | ವಯೋಮಿತಿ | ಮಾಸಿಕ ಸಂಭಾವನೆ |
|---|---|---|---|---|---|
| 1 | ತಾಂತ್ರಿಕ ಸಹಾಯಕರು (ಅರಣ್ಯೀಕರಣ) | BSc (Forestry) ಅಥವಾ ಸಮಾನಾಂತರ ಸಂಬಂಧಿಸಿದ ವಿದ್ಯಾರ್ಹತೆ | MSc (Forestry) ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಅನುಭವ | 21-40 ವರ್ಷ | ರೂ. 22000/- (ಪ್ರಯಾಣ ಭತ್ಯೆ ಪ್ರತಿ ಕಿ.ಮೀ.ಗೆ 5 ರೂ.ನಂತೆ ಗರಿಷ್ಠ ಮಾಸಿಕ ರೂ. 1500/-) |
| 2 | ತಾಂತ್ರಿಕ ಸಹಾಯಕರು (ಕೃಷಿ/ತೋಟಗಾರಿಕೆ ಮತ್ತು ರೇಷ್ಮೆ) | BSc(Agri), BSc(Horticulture) BSc(Sericulture), BSc(Dairy) ಅಥವಾ ಸಮಾನಾಂತರ ಸಂಬಂಧಿಸಿದ ವಿದ್ಯಾರ್ಹತೆ | MSc(Agri), MSc(Horticulture), MSc(Sericulture) ಮತ್ತು ಸಂಬಂಧಿಸಿದ ಕಾರ್ಯಕ್ಷೇತ್ರದಲ್ಲಿ ಅನುಭವ | 21-40 ವರ್ಷ | ರೂ. 22000/- (ಪ್ರಯಾಣ ಭತ್ಯೆ ಪ್ರತಿ ಕಿ.ಮೀ.ಗೆ 5 ರೂ.ನಂತೆ ಗರಿಷ್ಠ ಮಾಸಿಕ ರೂ. 1500/-) |

3. <u>ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯುವ ವಿಧಾನ:-</u>

1) ಅಭ್ಯರ್ಥಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಹಾತ್ಮ ಗಾಂಧಿ ನರೇಗಾ ಯೋಜನೆಯ ವೆಬ್‌ಸೈಟ್ http://end2endmgnrega.co.in/ ಮುಖಾಂತರ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸತಕ್ಕದ್ದು.

2) ಆನ್‌ಲೈನ್ ಅರ್ಜಿಗಳನ್ನು ದಿನಾಂಕ 20-04-2020 ರಿಂದ ಸ್ವೀಕರಿಸಲಾಗುವುದು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ 15-05-2020.

3) ಆನ್‌ಲೈನ್ ಅರ್ಜಿಯಲ್ಲಿರುವ ಎಲ್ಲಾ ಮಾಹಿತಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು.

4) ಮೆರಿಟ್ ಆಧಾರದ ಮೇರೆಗೆ ಅಭ್ಯರ್ಥಿಗಳನ್ನು ಹೊರಗುತ್ತಿಗೆ ಆಧಾರದ ಸೇವೆಗೆ ಸಂಬಂಧಿಸಿದ ಜಿಲ್ಲೆಗಳ ಅನುಮೋದಿತ ಮಾನವ ಸಂಪನ್ಮೂಲ ಸಂಸ್ಥೆಗಳ ಮುಖಾಂತರ ಸೇವೆ ಪಡೆದುಕೊಳ್ಳಲು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ತಿಳಿಸಲಾಗುವುದು.

5) ಹೊರಗುತ್ತಿಗೆ ಆಧಾರದ ಸಿಬ್ಬಂದಿಗಳ ಸೇವೆ ಪಡೆಯಲು ಯಾವುದೇ ನೇರ ಸಂದರ್ಶನ ಅಥವಾ ಲಿಖಿತ ಪರೀಕ್ಷೆ ಇರುವುದಿಲ್ಲ.

6) ಅಭ್ಯರ್ಥಿಗಳು ತಮಗೆ ಇಚ್ಛೆಯಿರುವ ಮೂರು ಜಿಲ್ಲೆಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ. ಮೆರಿಟ್ ಪಟ್ಟಿಯನ್ನು ಜಿಲ್ಲಾವಾರು ಮಾಡಲಾಗುವುದು. ಅಭ್ಯರ್ಥಿಗಳ ಪ್ರಥಮ ಆದ್ಯತೆಯ ಜಿಲ್ಲೆಗೆ ಪ್ರಥಮವಾಗಿ ಅವಕಾಶ ಕಲ್ಪಿಸಲಾಗುವುದು. ಉಳಿದ 2 ಜಿಲ್ಲೆಗಳ ಆಧ್ಯತೆಯನ್ನು ಪ್ರತೀಕ್ಷಾ ಪಟ್ಟಿಯಲ್ಲಿರಿಸಲಾಗುವುದು (Waiting List)

7) ಅಭ್ಯರ್ಥಿಗಳ ಪಟ್ಟಿ ತಯಾರಿಸಿದ ನಂತರ ದಾಖಲಾತಿ ಪರಿಶೀಲನೆಗೆ ಸಂಬಂಧಿಸಿದ ಜಿಲ್ಲಾ ಪಂಚಾಯತಿಯಿಂದ ಅಭ್ಯರ್ಥಿಗಳನ್ನು ಕರೆದು ನಿಗದಿತ ದಿನಾಂಕದಂದು ದಾಖಲಾತಿ ಪರಿಶೀಲನೆ ಕೈಗೊಳ್ಳಲಾಗುವುದು. ದಾಖಲಾತಿ ಪರಿಶೀಲನಾ ದಿನಾಂಕವನ್ನು ಅಭ್ಯರ್ಥಿಗಳಿಗೆ ಇ-ಮೇಲ್ ಮತ್ತು ವೆಬ್ ಸೈಟ್ ನೋಟೀಸ್ ಮೂಲಕ ತಿಳಿಸಲಾಗುವುದು. ದಾಖಲಾತಿ ಪರಿಶೀಲನಾ ದಿನದಂದು ಅಭ್ಯರ್ಥಿಗಳು ಹಾಜರಾಗದಿದ್ದಲ್ಲಿ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

8) ಅಭ್ಯರ್ಥಿಗಳು ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಮತ್ತು ಕನ್ನಡ ಮತ್ತು ಇಂಗ್ಲೀಷ್ ಭಾಷೆ ಚೆನ್ನಾಗಿ ತಿಳಿದಿರಬೇಕು.

9) ದಾಖಲಾತಿ ಪರಿಶೀಲನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸರ್ಕಾರದಿಂದ ಯಾವುದೇ ವಿಧವಾದ ಭತ್ಯೆ ನೀಡಲಾಗುವುದಿಲ್ಲ.

10) ಅರ್ಹ ಅಭ್ಯರ್ಥಿಗಳನ್ನು ನಿಗದಿಪಡಿಸಿದ ವಿದ್ಯಾರ್ಹತೆಗೆ ಅನುಗುಣವಾಗಿ ಮೆರಿಟ್ ಆಧಾರದ ಮೇರೆಗೆ ನಿರ್ದಿಷ್ಟಪಡಿಸಿದ ಮಾನದಂಡದಂತೆ ಆಯ್ಕೆ ಮಾಡಲಾಗುವುದು.

11) ನೇಮಕಾತಿಯಾದ ಅಭ್ಯರ್ಥಿಗಳು ಆಯಾ ಜಿಲ್ಲೆಯ ತಾಲ್ಲೂಕುಗಳ ಗ್ರಾಮ ಪಂಚಾಯತಿಗಳಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ನೇಮಿಸಿದ ಸ್ಥಳದಲ್ಲಿ ಕಾರ್ಯ ನಿರ್ವಹಿಸತಕ್ಕದ್ದು.

12) ಹೊರಗುತ್ತಿಗೆ ಸೇವಾ ಅವಧಿಯು 11 ತಿಂಗಳಾಗಿದ್ದು, ಇವರ ಕಾರ್ಯಕ್ಷಮತೆ ಪರಿಶೀಲಿಸಿ ಮುಂದುವರೆಸುವ ಬಗ್ಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ತೀರ್ಮಾನ ಕೈಗೊಳ್ಳುವರು.

13) ನೇಮಕಗೊಂಡ ಹೊರಗುತ್ತಿಗೆ ಸಿಬ್ಬಂದಿಯು ವಾರ್ಷಿಕ 12 ದಿನಗಳ ಸಾಂಧರ್ಭಿಕ ರಜೆ ಪಡೆಯಬಹುದು.

14) ಮಹಿಳೆಯರು Maternity Benefit Act 1961ರಡಿಯಲ್ಲಿ ಹೆರಿಗೆ ರಜೆ ಪಡೆಯಲು ಅರ್ಹರಾಗಿರುತ್ತಾರೆ.

15) ಆಯ್ಕೆಯಾದ ಅಭ್ಯರ್ಥಿಗಳು ತಾವು ನಿರ್ವಹಿಸುವ ಸ್ಥಳದಲ್ಲಿ ಅವ್ಯವಹಾರ ಅಥವಾ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಸಾಬೀತಾದಲ್ಲಿ ತಕ್ಷಣವೇ ಕೆಲಸದಿಂದ ತೆಗೆದುಹಾಕಲಾಗುವುದು ಹಾಗೂ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು.

16) ಮುಂದೆ ಭರ್ತಿಯಾದ ಹುದ್ದೆಗಳಲ್ಲಿ ಅನಿವಾರ್ಯ ಕಾರಣ ನಿಮಿತ್ತ ಖಾಲಿಯಾದಲ್ಲಿ ಮೇಲ್ಕಾಣಿಸಿದ ರೀತಿಯಲ್ಲಿಯೇ ಮಾನವ ಸಂಪನ್ಮೂಲ ಸಂಸ್ಥೆಗಳ ಮೂಲಕ ಹೊರಗುತ್ತಿಗೆ ಆಧಾರದ ಸೇವೆ ಪಡೆಯಲು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳೇ ಅಧಿಕಾರ ಹೊಂದಿರುತ್ತಾರೆ.

17) ಒಂದು ವೇಳೆ ಮೆರಿಟ್ ಆಧಾರದ ಮೇರೆಗೆ ಆಯ್ಕೆಯಾದ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ, ಅಂತಹ ಅಭ್ಯರ್ಥಿಗಳ ಆಯ್ಕೆಯನ್ನು ರದ್ದುಗೊಳಿಸಲಾಗುವುದು. ಮೆರಿಟ್ ಆಧಾರದ ಪ್ರತೀಕ್ಷಾ ಪಟ್ಟಿಯಲ್ಲಿರುವ (Waiting List) ಅಭ್ಯರ್ಥಿಗಳನ್ನು ಖಾಲಿಯಾಗುವ ಈ ಹುದ್ದೆಗಳಿಗೆ ಆಯ್ಕೆಗೆ ಪರಿಗಣಿಸಲಾಗುವುದು.

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ